ಅಘನಾಶಿನಿ ಜಲವಿದ್ಯುತ್ ಯೋಜನೆಯ ಬಗ್ಗೆ

1079 - ಶ್ರೀ ಉಮೇಶ್ ಭಟ್ (ಅಂಕೋಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಘನಾಶಿನಿ ಜಲವಿದ್ಯುತ್ ಯೋಜನೆಯ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಸ್.ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಅತಿ ಕಡಿಮೆ ಪ್ರದೇಶ ಮುಳುಗಡೆಯಾಗುವ ಮತ್ತು ಜಲಾಶಯದ ಪೂರ್ಣ ಮಟ್ಟವನ್ನು ಕಡಿಮೆಗೊಳಿಸುವ ಸಲುವಾಗಿ ಒಂದು ಪರ್ಯ ಯೋಜನೆಯನ್ನು ಈ ಬಗ್ಗೆ ರೂಪಿಸಲು ಅನ್ವೇಶಣಾ ಕಾರ್ಯ ನಡೆಯುತ್ತಿದೆ.

ಬಳ್ಳಾರಿ - ಕಾರವಾರ ಹೆದ್ದಾರಿಯ ಕುರಿತು

1080 - ಶ್ರೀ ಉಮೇಶ್ ಭಟ್ (ಅಂಕೋಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ - ಕಾರವಾರ ಹೆದ್ದಾರಿಯ ಯಲ್ಲಾಪುರದಿಂದ ಅಂಕೋಲಾವರೆಗಿನ ಕೆಲಸಕ್ಕೆ ರೂ.1 ಕೋಟಿ 80 ಲಕ್ಷ ಮಂಜೂರಾಗಿರುವುದು ನಿಜವಲ್ಲವೇ ಹಾಗಿದ್ದಲ್ಲಿ ಇಲ್ಲಿಯವರೆಗೆ ಯಾವುದೇ ಕೆಲಸ ನಡೆಯದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಕಾರಣಗಳೇನು? ಮತ್ತು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಬಳ್ಳಾರಿ - ಕಾರವಾರ ರಾಜ್ಯ ಹೆದ್ದಾರಿಯ ಭಾಗವಾದ ಅಂಕೋಲಾ - ಹುಬ್ಬಳ್ಳಿ ರಸ್ತೆ (132 ಕಿ.ಮೀ) ಅನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕಿನವರ ಸಹಾಯದಿಂದ ಅಭಿವೃದ್ಧಿಪಡಿಸಲು 90-91ನೇ ಸಾಲಿನಲ್ಲಿ 168 ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿತ್ತು. ಇಲ್ಲಿಯವರೆಗೆ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ.

ಆ) ಮೇಲ್ಕಂಡ ಕಾಮಗಾರಿಗಳ ಗುತ್ತಿಗೆಗಳನ್ನು ಅಂಗೀಕರಿಸುವುದಕ್ಕೆ ಯಾವುದೇ ಅಭ್ಯಂತರ ಇರುವುದಿಲ್ಲರೆಂದು ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನವರು ತಿಳಿಸಿದ್ದರ ಮೇರೆಗೆ ಫೆಬ್ರವರಿ 1991ರಲ್ಲಿ ಗುತ್ತಿಗೆಗಳನ್ನು ಅಂಗೀಕರಿಸಲಾಗಿದೆ. ಗುತ್ತಿಗೆದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲು ಕ್ರಮ ತೆಗೆದುಕೊಂಡಿದ್ದು ಏಪ್ರಿಲ್ 91ರಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸುವ ಕಾರ್ಯಕ್ರಮವಿದೆ.

ಲಿಖಿತ ಉತ್ತರದ ಪ್ರತಿಯನ್ನು ಸದಸ್ಯರಿಗೆ ಒದಗಿಸುವ ಬಗ್ಗೆ

1081 - ಶ್ರೀ ಉಮೇಶ ಭಟ್ (ಅಂಕೋಲಾ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳಿಗೆ ಲಿಖಿತ ಉತ್ತರ ಕಳಿಸಲಾಗುವುದು ಎಂದು ಹೇಳಿದ್ದೀರಿ. ಈ ತನಕ ಯಾವುದೇ ಲಿಖಿತ ಉತ್ತರ ಕೊಟ್ಟಿಲ್ಲ ಕಾರಣವೇನು?

ಆ) ಕೊಡುವುದಿದ್ದರೆ ಯಾವಾಗ ಕೊಡುತ್ತೀರಿ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಕಳೆದ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳಿಗೆ ಲಿಖಿತ ಉತ್ತರಗಳನ್ನು ವಿಧಾನ ಮಂಡಲದ ಕಛೇರಿಗೆ ರವಾನಿಸಲಾಗುತ್ತಿದೆ. ಈವರೆವಿಗೆ ಉತ್ತರಿಸದ ಪ್ರಶ್ನೆಗಳಿಗೂ ಉತ್ತರವನ್ನು ಕಳುಹಿಸಲಾಗುವುದು.

ಆ) (ಅ) ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ